ಕರ್ನಾಟಕ ಸರ್ಕಾರ

ಸಂ: ಡಿಟಿಇ 1 ಬಿಎಲ್ಎಸ್(1)2017

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001,
ದಿನಾಂಕ:05-02-2018

-:ಸುತ್ತೋಲೆ:-

ವಿಷಯ: ಪ್ರಯಾಣ ಭತ್ಯೆ ಬಿಲ್ಲುಗಳ ಮೇಲು ಸಹಿ ಕುರಿತು

-**-

2016-17ರ ಸಾಲಿನಿಂದ ಖಜಾನೆ-2 ವ್ಯವಸ್ಥೆಯು ಜಾರಿಗೆ ಬಂದಿದ್ದು ಪ್ರಯಾಣ ಭತ್ಯೆ ಬಿಲ್ಲುಗಳನ್ನು ಸಹ ಖಜಾನೆ-2 ರಲ್ಲಿಯೇ ತಯಾರಿಸಿ ಮೇಲು ಸಹಿಗೆ ಸಲ್ಲಿಸಬೇಕಿರುತ್ತದೆ. ಈ ವಯವಸ್ಥೆಯಡಿ ಬಿಲ್ಲುಗಳಲ್ಲಿನ ಯಾವುದೇ ಲೋಪವಿದ್ದಲ್ಲಿ ಹಿಂದಿನಂತೆ ಮೇಲು ಸಹಿ ಹಂತದಲ್ಲಿ ತಿದ್ದುಪಡಿಯೊಂದಿಗೆ ಮೇಲು ಸಹಿ ಮಾಡಲು ಅವಕಾಶವಿರುವುದಿಲ್ಲ, ಬದಲಿಗೆ ಬಿಲ್ಲನ್ನು ಪರಿಷ್ಕರಣೆಗಾಗಿ ಹಿಂದಿರುಗಿಸಬೇಕಾಗಿರುತ್ತದೆ ಮತ್ತು ಡ್ರಾಯಿಂಗ್ ಅಧಿಕಾರಿಯು ಬಿಲ್ಲನ್ನು ಹೊಸದಾಗಿ ತಯಾರಿಸಿ ಸಲ್ಲಿಸಬೇಕಿರುತ್ತದೆ. ಇದಕ್ಕೆ ಅವಕಾಶವೀಯದಂತೆ ನಿಯಮಾನುಸಾರ ಬಿಲ್ಲುಗಳನ್ನು ಮೇಲು ಸಹಿಗೆ ಸಲ್ಲಿಸಲು ಸಂಬಂಧಪಟ್ಟ ಎಲ್ಲಾ ಇಂಜಿನಿಯರಿಂಗ್ ಪಾಲಿಟೆಕ್ನಿಕ್ ಹಾಗೂ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳು ಕ್ರಮವಹಿಸಲು ತಿಳಿಸಿದೆ.

1. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 22(ಎ)ರ ಪ್ರಕಾರ ಪ್ರಯಾಣ ಭತ್ಯೆ ಬಿಲ್ಲನ್ನು ಒಂದು ವರ್ಷದ ಅವಧಿಯೊಳಗೆ ಖಜಾನೆಗೆ ಸಲ್ಲಿಸಬೇಕಿರುತ್ತದೆ. ಈ ಅವಧಿ ಮೀರಿದ ಬಿಲ್ಲುಗಳನ್ನು ತಿರಸ್ಕರಿಸಬೇಕಿರುತ್ತದೆ. ಯಾವುದೇ ಪ್ರಯಾಣ ಭತ್ಯೆಯ ಬಿಲ್ಲನ್ನು ಪ್ರಯಾಣ ಮುಕ್ತಾಯಗೊಂಡ ಒಂದು ವರ್ಷದೊಳಗೆ ಖಜಾನೆಗೆ ಸಲ್ಲಿಸದಿದ್ದ ಪಕ್ಷದಲ್ಲಿ ನಂತರ ಅಂತಹ ಬಿಲ್ಲನ್ನು ಅಂಗೀಕರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಒಂದು ಪಕ್ಷ ನಿಗಧಿತ ಅವಧಿಯೊಳಗೆ ನೌಕರನು ಕ್ಲೇಮನ್ನು ಕಛೇರಿಗೆ ಸಲ್ಲಿಸಿದ್ದು, ಕಛೇರಿಯಿಂದ ಬಿಲ್ಲನ್ನು ಖಜಾನೆಗೆ ಸಲ್ಲಿಸದಿದ್ದಲ್ಲಿ ಸಂಬಂಧಪಟ್ಟ ಕಛೇರಿಯ ಅಧಿಕಾರಿಯು ಇದಕ್ಕೆ ಹೊಣೆಯಾಗಿದ್ದು ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕಾಗುತ್ತದೆ. ಇಂತಹ ಪ್ರಸಂಗದಲ್ಲಿ ಕಾಲವಿಳಂಬಮನ್ನಾ ಆದೇಶ ಹೊರಡಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ನಿಯಮಗಳನ್ನು ಗಮನಿಸದೆ ಡ್ರಾಯಿಂಗ್ ಅಧಿಕಾರಿಗಳು ಪ್ರಯಾಣಭತ್ಯೆ ಅನುದಾನ ಲಭ್ಯವಿರಲಿಲ್ಲವೆಂಬ ಸಾಮಾನ್ಯ ಸಬೂಬುಗಳೊಂದಿಗೆ ಕಾಲವಿಳಂಭ ಬೇಡಿಕೆಯೊಂದಿಗೆ ಒಂದರಿಂದ ಐದು/ಆರು ವರ್ಷ ಮೀರಿದ ಅವಧಿಯ ಪ್ರಯಾಣ ಭತ್ಯೆ ಬಿಲ್ಲುಗಳನ್ನು ಮೇಲುಸಹಿಗಾಗಿ ಕಳುಹಿಸಿಕೊಡಲಾಗುತ್ತಿದ್ದು ಅವುಗಳನ್ನು ತಿರಸ್ಕರಿಸಬೇಕಾದ ಪರಿಸ್ಥಿತಿಯೊದಗಿರುತ್ತದೆ.

ನಿಗದಿತ ಅವಧಿಯೊಳಗೆ ಬಿಲ್ಲನ್ನು ತಯಾರಿಸಿ ಮೇಲುಸಹಿಯೊಂದಿಗೆ ಅದಕ್ಕೆ ಬೇಕಾದ ಅನುದಾನವನ್ನು ಪಡೆದುಕೊಂಡು ಖಜಾನೆಗೆ ಸಲ್ಲಿಸಲು ಡ್ರಾಯಿಂಗ್ ಅಧಿಕಾರಿಗಳು ಕ್ರಮವಹಿಸಬೇಕಿರುತ್ತದೆ.

ಮೇಲ್ಕಂಡ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ವಹಿಸಿದ್ದಾಗ್ಯೂ ಕೆಲವೊಂದು ಆಡಳಿತಾತ್ಮಕ ಕಾರಣಗಳಿಂದಾಗಿ ನಿಗದಿತ ಅವಧಿಯೊಳಗೆ ಅನುದಾನ ಬಿಡುಗಡೆಯಾಗದೆ ಬಿಲ್ಲನ್ನು ಖಜಾನೆಗೆ ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಮಾತ್ರ ನೌಕರನು ಕ್ಲೇಮನ್ನು ಕಛೇರಿಗೆ ಸಲ್ಲಿಸಿದ ದಿನಾಂಕ, ಅನುದಾನ ಬಿಡುಗಡೆಗಾಗಿ ಬೇಡಿಕೆಯನ್ನು ಸಲ್ಲಿಸಲಾದ ಕೋರಿಕೆ ಪತ್ರಗಳ ಎಲ್ಲಾ ವಿವರಗಳನ್ನು ಪರಿಶೀಲನೆಗೆ ಸಲ್ಲಿಸಬೇಕಿರುತ್ತದೆ. ಅಂತಹ ವಿಶೇಷ ಪ್ರಕರಣಗಳಲ್ಲಿ ಮಾತ್ರ ಕೂಲಂಕಷ ತನಿಖೆಯ ನಂತರ ಕಾಲವಿಳಂಬವನ್ನು ಕೋರಿಕೆಯನ್ನು ಸಲ್ಲಿಸಬೇಕಾಗಿರುತ್ತದೆ.

ಆದಕಾರಣ ನಿಯಮಾನುಸಾರ ಪ್ರಯಾಣಭತ್ಯೆ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವಂತೆ ಸಂಬಂಧಪಟ್ಟ ಪ್ರಾಂಶುಪಾಲರುಗಳ ಗಮನಕ್ಕೆ ತರಲಾಗಿದೆ. ತಪ್ಪಿದ್ದಲ್ಲಿ ಯಾವುದೇ ಲೋಪ/ನಷ್ಟಗಳಿಗೆ ಸಂಬಂಧಪಟ್ಟ ಡ್ರಾಯಿಂಗ್ ಅಧಿಕಾರಿಗಳು ಹೊಣೆಯಾಗಬೇಕಾಗಿರುತ್ತದೆಯಾಗಿ ತಿಳಿಸಿದೆ.

ನಿರ್ದೇಶಕರು

ಇವರಿಗೆ,

ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳು ಇವರ ಮುಂದಿನ ಸೂಕ್ತ ಕ್ರಮಕ್ಕಾಗಿ

ಪ್ರತಿ,

ಡಿಟಿಇ ವೆಬ್‌ಸೈಟ್ ಇ-ಗವರ್ನೆನ್ಸ್ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು